# NATURAL RSEOUCE DATA MANAGEMENT SYSTEM

# (NRDMS)

## Haveri District Quadrimestral Activity Report
## December 2025-March- 2026

## Submitted By


District NRDMS Centre,

Zilla Panchayat, Haveri.

**Karnataka State Council for Science and Technology (KSCST)**

**Indian Institute of Science Campus,**


**Bengaluru- 560012**

# ವಿಷಯ ಪರಿವಿಡಿ


| **1.** NRDMS Centre Activities | **ಪುಟ ಸಂಖ್ಯೆ** |
|---|---|
| **1.1** ಯುಕ್ತಧಾರ ತಂತ್ರಾಂಶದಲ್ಲಿ ಜಿಯೋಸ್ಪೇಷಿಯಲ್ ಆಧಾರಿತ ಕ್ರಿಯಾ ಯೋಜನೆ. | 3 |
| 1.2 ಗ್ರಾಮ ಪಂಚಾಯತ ಚುನಾವಣೆಗೆ ನಕ್ಷೆ | 4 |
| 1.3 ಕಂದಾಯ ಇಲಾಖೆಗೆ ಜಿಯೋಸ್ಪೇಷಿಯಲ್ ಆಧಾರಿತ ನಕಾಶೆ. | 5 |
| 1.4 ಕಂದಾಯ ಇಲಾಖೆಯ ಹಕ್ಕುಪತ್ರ ವಿತರಣಾ ಸಮಾವೇಶ ನಡೆಯುವ ಸ್ಥಳ ಹಾಗೂ ವಾಹನ ನಿಲುಗಡೆ ನಕ್ಷೆ. | 6 |
| 1.5 ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾವೇರಿ ಜಿಲ್ಲೆ ಕೌಶಲ್ಯಭಿವೃದ್ಧಿ ಉದ್ಯಮಶೀಲತಾ ಹಾಗೂ ಜೀವನೋಪಾಯ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾಮಟ್ಟದ ಉದ್ಯೋಗ ಮೇಳ-2026ರಲ್ಲಿ ಭಾಗವಹಿಸಿದ ಅಭ್ಯರ್ಥಿಗಳ ಮಾಹಿತಿಯನ್ನು Power BI Dashboard ನಲ್ಲಿ ಇಂಧೀಕರಿಸಿ ಮಾಹಿತಿ ವಿಶ್ಲೇಷಣೆ | 7 |
| 1.6 ಪೋಲೀಸ್ ಇಲಾಖೆಗೆ ಜಿಯೋಸ್ಪೇಷಿಯಲ್ ಆಧಾರಿತ ನಕಾಶೆ. | 8 |
| 1.7 2027ರ ಭಾರತ ಜನಗಣತಿ ಕುರಿತು ಬ್ಲಾಕ್ ರಚನೆಯಲ್ಲಿ GIS ನಕ್ಷೆ | 9 |
| **2.** ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು(Training Programmes Attended) | 10 |
| 4. ವಿಜ್ಞಾನ ಪ್ರಚಾರ ಚಟುವಟಿಕೆಗಳು (Science Outreach Activities) | 11-13 |
| 5. ತಿರ್ಮಾನ | 14 |
| **6.** NRDMS ಚಟುವಟಿಕೆಗಳನ್ನು ಸುಧಾರಿಸಲು ಬದ್ಧತೆ | |
| 7. ಅನುಬಂಧಗಳು | 15 |

## 1.1. ಯುಕ್ತಧಾರ ತಂತ್ರಾಂಶದಲ್ಲಿ ಜಿಯೋಸ್ಪೇಷಿಯಲ್ ಆಧಾರಿತ ಕ್ರಿಯಾ ಯೋಜನೆ.


ಜಿಲ್ಲೆಯಲ್ಲಿನ ಗ್ರಾಮ ಪಂಚಾಯತಗಳಲ್ಲಿ  ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಮಣ್ಣು ಮತ್ತು ನೀರು ಸಂರಕ್ಷಣೆ ಹಾಗೂ ಜೀವನೋಪಾಯ ಚಟುವಟಿಗಳ ನಿರ್ವಹಣೆಗಾಗಿ ಸಮಗ್ರ ನೈಸರ್ಗಿಕಸಂಪನ್ಮೂಲ ನಿರ್ವಹಣೆ ಕಾಮಗಾರಗಳ ಅನುಷ್ಠಾನಗೊಳಿಸುವ ಕಾಮಗಾರಿಗಳನ್ನು ಯುಕ್ತಧಾರ ತಂತ್ರಾಂಶದ ಇಂಧೀಕರಿಸುವುದು ಕಡ್ಡಾಯವಾಗಿರುತ್ತದೆ. ಸದರಿ ಗ್ರಾಮ ಪಂಚಾಯತ ವಾರು GIS  ಆಧಾರಿತ ಕ್ರಿಯಾಯೋಜನೆ ಸಿದ್ಧಪಡಿಸಲು ಗ್ರಾಮ ಪಂಚಾಯತ ಗಡಿ ಅತ್ಯಾವಶ್ಯಕವಿದ್ದು ಜಿಲ್ಲಾ NRDMS ಕೇಂದ್ರವು KML ರೂಪದಲಲ್ಲಿ ಗಡಿಗಳನ್ನು ಸಿದ್ಧಪಡಿಸಿ ಯುಕ್ತಧಾರ ತಂತ್ರಾಂಶದಲ್ಲಿ ಅಪ್ ಲೋಡ್ ಮಾಡಲು ಒದಗಿಸುತ್ತದೆ.




**ನಕಾಶೆ:1.** ಕಮದೊಡ ಗ್ರಾ.ಪಂ.  ಸರಹದ್ದು ನಕಾಶೆ.

## 1.2 ಗ್ರಾಮ ಪಂಚಾಯತ ಚುನಾವಣೆಗೆ ನಕ್ಷೆ

2026ರಲ್ಲಿ ಜರುಗಲಿರುವ ಗ್ರಾಮ ಪಂಚಾಯತಗಳ ಚುನಾವಣೆಗೆ ಸಂಬಂಧಿಸಿದಂತೆ ತಾಲ್ಲೂಕುವಾರು ಗ್ರಾಮ ಪಂಚಾಯತಗಳ ಗಡಿ ನಕಾಶೆ ಯನ್ನು NRDMS ಕೇಂದ್ರದಲ್ಲಿ ಲಭ್ಯವಿರುವ ಗ್ರಾಮ, ಗ್ರಾಮ ಪಂಚಾಯತ ಹಾಗೂ ತಾಲ್ಲೂಕು ಗಡಿಗಳನ್ನು ಬಳಸಿಕೊಂಡು ಸದರಿ ನಕಶೆ ಸಿದ್ದಪಡಿಸಿ ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿರುವ ಚುನಾವಣಾ ವಿಭಾಗಕ್ಕೆ ಸಲ್ಲಿಸಲಾಯಿತು.




**ನಕಾಶೆ:2.** ಹಾವೇರಿ ತಾಲ್ಲೂಕು ಸರಹದ್ದು ನಕಾಶೆ.

## 1.3 ಕಂದಾಯ ಇಲಾಖೆಗೆ ಜಿಯೋಸ್ಪೇಷಿಯಲ್ ಆಧಾರಿತ ನಕಾಶೆ.

ಹಾವೇರಿ ಜಿಲ್ಲೆ ಹಿರೆಕೆರೂರು ತಾಲ್ಲೂಕಿನ ನೂಲಗೆರಿ ಗ್ರಾಮದ ರಿಸನಂ.54ಅ ರಲ್ಲಿ ಹೊಸದಾಗಿ ನಿರ್ಮಿಸಿರುವ ಸರಕಾರಿ ಪದವಿ ಪೂರ್ವ ಕಾಲೇಜಿಗೆ ಮಂಜೂರು ಕೋರಿರುವ ಜಮೀನು ಜಲಮೂಲ/ಜಲಕಾಯ ಜಮೀನೇ ಎಂಬುದನ್ನು ಪರಿಶೀಲಿಸಲು GIS ಆಧಾರಿತ ನಕ್ಷೆಯೊಂದಿಗೆ ಪ್ರಸ್ತಾವನೆಯನ್ನು ಸರಕಾರಕ್ಕೆ ಸಲ್ಲಿಸುವಂತೆ ಮಾನ್ಯ ಕಂದಾಯ ಆಯುಕ್ತರು,ಕಂದಾಯ ಆಯುಕ್ತಾಲಯ ಬೆಂಗಳೂರರು ಇವರು ನಿರ್ದೇಶಿಸಿದ್ದು ಇರುತ್ತದೆ.

ಈ ಕುರಿತು ತಹಶೀಲ್ದಾರ ಹಿರೇಕೆರೂರು ಇವರಿಂದ ಸದರಿ ಜಮೀನಿನ ಮಾಹಿತಿಯನ್ನು ಪಡೆದು ನೂಲಗೆರಿ ಗ್ರಾಮದ ರಿಸನಂ.54ಅ ರಲ್ಲಿ ಹೊಸದಾಗಿ ನಿರ್ಮಿಸಿರುವ ಸರಕಾರಿ ಪದವಿ ಪೂರ್ವ ಕಾಲೇಜಿಗೆ ಮಂಜೂರು ಕೋರಿರುವ ಜಮೀನು ಜಲಮೂಲ/ಜಲಕಾಯದಿಂದ (ಕೆರೆ/ಕಟ್ಟೆ) 30 ಮೀಟರ್ ಬಫರ್ ಝೋನ್ (ನಿಭರದಿತ ಪ್ರದೇಶ)ವ್ಯಾಪ್ತಿಗೆ ಬರದೇ 455ಮೀಟರ್ ದೂರದಲ್ಲಿ ಇದೆ ಎಂಬ ಮಾಹಿತಿಯ ನಕ್ಷೆಯನ್ನು GIS ತಂತ್ರಾಂಶ ಬಳಸಿ ಸಿದ್ದಪಡಿಸಿ ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಲಕ್ಕೆ ಸಲ್ಲಿಸಲಾಯಿತು.


ಸದರಿ ಮಾಹಿತಿಯ ನಕ್ಷೆ ಸಿದ್ಧಪಡಿಸಲು ಕೆರೆ/ಕಟ್ಟೆ, ಪದವಿ ಪೂರ್ವ ಕಾಲೇಜಿನ ಅಕ್ಷಾಂಶ ಮತ್ತು ರೇಖಾಂಶ, ಕಂದಾಯ ಗ್ರಾಮ ಗಡಿ, ಹಾಗೂ ಉಪಗ್ರಹ ಆಧಾರಿತ ಚಿತ್ರದ ಪದರುಗಳನ್ನು ಬಳಸಲಾಗಿದೆ.




**ನಕಾಶೆ:3 ಹಿರೇಕೆರೂರು ತಾಲ್ಲೂಕಿನ ನುಲಗೆರಿ ಗ್ರಾಮದ ನಕ್ಷೆ**

# 1.4 ಕಂದಾಯ ಇಲಾಖೆಯ ಹಕ್ಕುಪತ್ರ ವಿತರಣಾ ಸಮಾವೇಶ ನಡೆಯುವ ಸ್ಥಳ ಹಾಗೂ ವಾಹನ ನಿಲುಗಡೆ ನಕ್ಷೆ.


ಮಾನ್ಯ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ದಿನಾಂಕ 13-02-2026ರಂದು ಜಿಲ್ಲೆಯಲ್ಲಿ ಕರ್ನಾಟಕ ಸರಕಾರದ ವತಿಯಿಂದ ಆಯೋಜಿಸುವ ಕಂದಾಯ ಇಲಾಖೆಯ ಹಕ್ಕುಪತ್ರ ವಿತರಣಾ ಕಾರ್ಯಕ್ರಮಕ್ಕೆ ಪೂರಕವಾಗಿ ಕಾರ್ಯಕ್ರಮ ನಡೆಯುವ ಸ್ಥಳ ಹಾಗೂ ವಾಹನ ನಿಲುಗಡೆ ನಕ್ಷೆಯನ್ನು ಸಿದ್ಧಪಡಿಸಿ ಸಲ್ಲಿಸಲಾಯಿತು.





ನಕಾಶೆ-4 ಕಾರ್ಯಕ್ರಮ ನಡೆಯುವ ಸ್ಥಳ ಹಾಗೂ ವಾಹನ ನಿಲುಗಡೆ ನಕ್ಷೆ.

### 1.5 ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾವೇರಿ ಜಿಲ್ಲೆ ಕೌಶಲ್ಯಭಿವೃದ್ಧಿ ಉದ್ಯಮಶೀಲತಾ ಹಾಗೂ ಜೀವನೋಪಾಯ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾಮಟ್ಟದ ಉದ್ಯೋಗ ಮೇಳ-2026ರಲ್ಲಿ ಭಾಗವಹಿಸಿದ ಅಭ್ಯರ್ಥಿಗಳ ಮಾಹಿತಿಯನ್ನು Power BI Dashboard ನಲ್ಲಿ ಇಂಧೀಕರಿಸಿ ಮಾಹಿತಿ ವಿಶ್ಲೇಷಣೆ:

ಜಿಲ್ಲಾ ಮಟ್ಟದ ಉದ್ಯೋಗ ಮೇಳ-2026' ರಲ್ಲಿ ವಿವಿಧ ಜಿಲ್ಲೆಗಳಿಂದ Google Sheet ನೊಂದಣಿ ಮಾಡಿಕೊಂಡು ಭಾಗವಿಸುವ ಅಭ್ಯರ್ಥಿಗಳ ಮಾಹಿತಿ ಆಧಾರಿತ ದತ್ತಾಂಶವನ್ನು Power BI ತಂತ್ರಾಂಶದ ಮೂಲಕ Dashboard ಸಿದ್ಧಪಡಿಸಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಗಳು ಜಿಲಾ ಪಂಚಾಯತ ಹಾವೇರಿರವರಿಗೆ ಸಲ್ಲಿಸಲಾಯಿತು.





ಚಾರ್ಟ್:1 □□□□□ 2

## 1.6 ಪೋಲೀಸ್ ಇಲಾಖೆಗೆ ಜಿಯೋಸ್ಪೇಷಿಯಲ್ ಆಧಾರಿತ ನಕಾಶೆ.

ಹಾವೇರಿ ಜಿಲ್ಲೆ ಸವಣೂರು ಪೋಲೀಸ್ ಠಾಣೆಯ ಬೀಟ್ವಾರು ಸರಹದ್ದು ನಕ್ಷೆ ನೀಡುವಂತೆ ಪೋಲೀಸ್ ಇನ್ಸಪೆಕ್ಟರ್ ಸವಾಣೂರು ಠಾಣೆ ಇವರು ಕೋರಿರುತ್ತಾರೆ.

ಅದರಂತೆ ಪೋಲೀಸ್ ಇನ್ಸಪೆಕ್ಟರ್ ಸವಾಣೂರು ಠಾಣೆ ಇವರಿಂದ ಸದರಿ ಠಾಣೆಯ ಅಕ್ಷಾಂಶ ,ರೇಖಾಂಶ ಬೀಟ್ ಹಾಗೂ ಸರಹದ್ದು ಮಾಹಿತಿಯನ್ನು ಪಡೆದು NRDMS ದತ್ತಾಂಶದಲ್ಲಿ ಇಂದೀಕರಿಸಿ ಸವಾಣೂರು ಠಾಣೆ ಸರಹದ್ದು ಮಾಹಿತಿಯ ನಕ್ಷೆಯನ್ನು GIS ತಂತ್ರಾಂಶ ಬಳಸಿ ಸಿದ್ಧಪಡಿಸಿ ಮಾನ್ಯರಿಗೆ ಸಲ್ಲಿಸಲಾಯಿತು.

ಸದರಿ ಮಾಹಿತಿಯ ನಕ್ಷೆ ಸಿದ್ಧಪಡಿಸಲು ಠಾಣೆ ಅಕ್ಷಾಂಶ ಮತ್ತು ರೇಖಾಂಶ, ಕಂದಾಯ ಗ್ರಾಮ ಗಡಿ, ಹಾಗೂ ಬೀಟ್ ಪದರುಗಳನ್ನು ಬಳಸಲಾಗಿದೆ.





ನಕಾಶೆ: 5 ಸವಣೂರು ಪೋಲೀಸ್ ಠಾಣೆಯ ಬೀಟ್ ವಾರು ಸರಹದ್ದು ನಕ್ಷೆ

## 1.7 2027ರ ಭಾರತ ಜನಗಣತಿ ಕುರಿತು ಬ್ಲಾಕ್ ರಚನೆಯಲ್ಲಿ GIS ನಕ್ಷೆ.

ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯವು 2027ರ ಭಾರತ ಜನಗಣತಿ ಸಮೀಕ್ಷೆ ಕಾರ್ಯಕ್ಕೆ ಪೂರಕವಾಗಿ 2026 ಎಪ್ರೀಲ್ ಮಾಹೆಯಲ್ಲಿ ಜಿಲ್ಲೆಯಲ್ಲಿ ಮನೆಗಳ ಸಮೀಕ್ಷೆ ಕಾರ್ಯ ನಡೆಸಲಾಗುತ್ತಿದ್ದು, ಸದರಿ ಸಮೀಕ್ಷೆಗೆ ಗ್ರಾಮ/ವಾರ್ಡವಾರು KML ಗಡಿ ನಕ್ಷೆಗಳು ಅವಶ್ಯಕವಿದ್ದು, ಜಿಲ್ಲಾ NRDMS ಕೇಂದ್ರವು ತಾಲ್ಲೂಕುವಾರು ಸದರಿ KML ಗಡಿ ನಕ್ಷೆಗಳನ್ನು ಸಿದ್ದಪಡಿಸಿ ಸಲ್ಲಿಸಲಾಯಿತು.

ಸದರಿ ಮಾಹಿತಿಯ ನಕ್ಷೆ ಸಿದ್ದಪಡಿಸಲು ಗ್ರಾಮ ಗಡಿ ಪದರುಗಳನ್ನು ಬಳಸಲಾಗಿದೆ.




ನಕಾಶೆ: 6 ಅಳಲಗೇರಿ KML ಗಡಿ ನಕ್ಷೆ

## **2.** Training Programmes Attended

ಆಡಳಿತ ತರಬೇತಿ ಸಂಸ್ಥೆ ಮೈಸೂರಿನ ವಿಪತ್ತು ನಿರ್ವಹಣಾ ಕೇಂದ್ರದ ವತಿಯಿಂದ ಆಡಳಿತ ತರಬೇತಿ ಮೈಸೂರಿನೇದ್ವರಲ್ಲಿ ದಿನಾಂಕ 05-03-2026 ರಿಂದ 07-03-2026ರ ವರೆಗೆ ವಿಷಯಾಧಾರಿತ ಕಾರ್ಯಕ್ರಮ ದೊಡ್ಡ ಸಭೆ/ಸಮಾರಂಭಗಳ ವಿಪತ್ತು ಅಪಾಯ ವಿತಗೊಳಿಸುವಿಕೆ(Management of Large Congrigation and Stampede Risk Rudction) ಕರಿತು ಆಯೋಜಿದ ತರಬೇತಿಯಲ್ಲಿ ಭಾಗವಿಸಲಾಯಿತು.




ಚಿತ್ರ:1




ಚಿತ್ರ:2

## 3.Science Outreach Activities

### ವಿಜ್ಞಾನ ಪ್ರಚಾರ ಚಟುವಟಿಕೆಗಳು

ದಿನಾಂಕ 24-12-2025ರಂದು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಕರ್ನಾಟಕ ಸರ್ಕಾರ, ಬೆಂಗಳೂರುಜಿಲ್ಲಾ ಪಂಚಾಯತ ಹಾವೇರಿ ಹಾಗೂ ಶಾಲಾ ಶಿಕ್ಷಣ ಇಲಾಖೆ ಹಾವೇರಿ ಇವರ ಸಹಕಾರದೊಂದಿಗೆ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕಾರ್ನಾಟಕ ಸರ್ಕಾರ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಭಾರತ ಸರ್ಕಾರ, ನವದೆಹಲಿ ಇವರ ಬೆಂಬಲದೊಂದಿಗೆ **ಸರ್ಕಾರಿ ಪ್ರೌಡಶಾಲೆ ಇಟಗಿ,ತಾಲ್ಲೂಕ-ರಾನೇಬೆನ್ನೂರು, ಜಿಲ್ಲೆ: ಹಾವೇರಿ** ಇಲ್ಲಿ **"ರಾಷ್ಟ್ರೀಯ ರ ಗಣಿತ ದಿನಾಚರಣೆ-2025"** ಆಚರಿಸಲಾಯಿತು.



ಚಿತ್ರ:3

| | |
|---|---|
| District: | Haveri |
| Date of the programme: | 24 December 2025 |
| Venue: | Government High School, Itagi |
| No. of students participated: | 270 |
| Details of resource person / Chief Guest / expert | Chief Guest- 1) Mr..Manjanayak, BRC,BEO , Ranebennur<br>2) Nagaraj N, BRC, Ranebennur<br>3) Guddappa Naik, PDO, Gram Panchayat, Itagi<br>4) Mr. Basavaraj Somakkalavar, Head Master, Govt High School,Itagi<br>5) Mr. Basavaraj Barki, Project Associate, NRDMS Centre, Zilla Panchayat, Haveri<br><br>Resource Persons- 1. Omprakash Yattinahalli, Education Coordinator, BEO, Haveri.<br>2.Mr.Basanagouda Patil, Maths Subject Inspector, DDPI Haveri |

ಕರ್ನಾಟಕ ಸರ್ಕಾರ

**ಸರಕಾರಿ ಪ್ರೌಢಶಾಲೆ ಇಟಗಿ ತಾ.ರಾಣೇಬೆನ್ನೂರು ಜಿ.ಹಾವೇರಿ 581123**

Email: hmghsitagi1@gmail.com mobile no: 9986968042

## ರಾಷ್ಟ್ರೀಯ ಗಣಿತ ದಿನಾಚರಣೆಯ ವರದಿ

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಕರ್ನಾಟಕ ಸರ್ಕಾರ ಬೆಂಗಳೂರು ಜಿಲ್ಲಾ ಪಂಚಾಯತಿ ಹಾವೇರಿ ಶಾಲಾ ಶಿಕ್ಷಣ ಇಲಾಖೆ ಹಾವೇರಿ, ಹಾಗೂ ಸರಕಾರಿ ಪ್ರೌಢಶಾಲೆ ಇಟಗಿ ತಾ.ರಾಣೆಬೆನ್ನುರು ಇವರೆಲ್ಲರ ಸಂಯುಕ್ತ ಆಶ್ರಯದಲ್ಲಿ ದಿನಾಂಕ: 24/12/2025 ರಂದು ರಾಷ್ಟ್ರೀಯ ಗಣಿತ ದಿನಾಚರಣೆ-೨೦೨೫ ನ್ನು ಅದ್ದೂರಿಯಾಗಿ ಆಚರಿಸಲಾಯಿತು. ಕಾರ್ಯಕ್ರಮದ ಉದ್ಘಾಟಕರಾಗಿ ಶಾಲಾ ಶಿಕ್ಷಣ ಇಲಾಖೆ ಹಾವೇರಿ ಇಲಾಖೆಯ ಉಪನಿರ್ದೇಶಕರ ಕಛೇರಿಯ ಗಣಿತ ವಿಷಯ ಪರಿವೀಕ್ಷಕರಾದ ಶ್ರೀ ಬಸನಗೌಡ ಪಾಟೀಲ್ ಇವರು ಉದ್ಘಾಟಿಸಿದರು ಗಣಿತ ಕಲಿಕೆಯ ಮಹತ್ವ ವಿವರಿಸಿದರು ಶ್ರೀ ಶೀನಿವಾಸ್ ರಾಮಾಜನ್ ಅವರ ಗಣಿತ ಕಲಿಕೆ ಬಗ್ಗೆ ವಿವರಿಸಿದರು. ವಿಜ್ಞಾನ ಮಹತ್ವ, ಗಣಿತ ಮತ್ತು ವಿಜ್ಞಾನ ಮೂಡನಂಬಿಕೆಯನ್ನು ಹೇಗೆ ಹೊಗಲಾಡಿಸುತ್ತದೆ,ಮತ್ತು ಮಕ್ಕಳಲ್ಲಿ ಮನೋಭಾವನೆ ಬೆಳೆಯಲು ಉತ್ತೇಜಿಸಿದರು ಹಾಗೂ ಎಸ್ ಎಸ್ ಎಲ್ ಸಿ ಪರೀಕ್ಷೆ ತಯಾರಿ ಹೇಗೆ ವಿದ್ಯಾರ್ಥಿಗಳು ಮಾಡಬೇಕು ತಿಳಿಸಿದರು.ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಂಜುನಾಯ್ಕ ಕ್ಷೇತ್ರ ಸಮನ್ವಯಾಧಿಕಾರಿಗಳು ಇವರು ಗಣಿತ ಸರಳವಾಗಿ ಹೇಗೆ ಕಲಿಯುವದು ಎಂದು ವಿವರಿಸಿದರು ಮತ್ತು . ಮುಖ್ಯಅಥಿಗಳಾಗಿ ಜಿಲ್ಲಾ ಪಂಚಾಯತಿ, ಹಾವೇರಿಯ ಕಾರ್ಯಾಲಯದ ಎನ್.ಆರ್.ಡಿ ಎಮ್. ಎಸ್. ವಿಭಾಗದ ಯೋಜನಾ ಸಯೋಜಕರಾದ ಶ್ರೀ ಬಸವರಾಜ ಬಾರ್ಕಿ ಕಾರ್ಯಕ್ರಮ ಸಂಯೋಜನೆ ನೋಡಿಕೊಂಡರು.ಅತಿಥಿಗಳಾಗಿ ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಗುಡ್ಡಪ್ಪ ನಾಯ್ಕ ಹಾಗೂ ಸಿಬ್ಬಂದಿ, ಬಿ.ಆರ್.ಸಿ ಸಂಪಮ್ಮೂಲ ವ್ಯಕ್ತಿಯಾದ ಶ್ರೀ ನಾಗರಾಜ ಎನ್. ಇವರು ಮಾತನಾಡಿದರು ಶಾಲೆಯ ಸಿಬ್ಬಂದಿವರ್ಗದವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶ್ರೀಮತಿ ನಳಿನಾ ಕೆ.ಎಸ್. ಅವರು ಕಾರ್ಯಕ್ರಮದ ನಿರೂಪಿಸಿದರು. ಶಾಲೆಯ ಪ್ರಬಾರ ಮುಖ್ಯೋಪಾಧ್ಯಾಯರಾದ ಶ್ರೀ ಬಸವರಾಜ ಸೋಮಕ್ಕಳವರ ಅವರು ಸ್ವಾಗತವನ್ನು ಕೋರಿದರು. ಶ್ರೀ ಸಮತೋಷನಾಯ್ಕ ಜಿ , ಇವರು ವಂದನಾರ್ಪಣೆಯನ್ನು ಮಾಡಿದರು

ಹಾವೇರಿ ತಾಲೂಕಿನ ಶಿಕ್ಷಣ ಸಂಯೋಜಕರಾದ ಶ್ರೀ ಓಂಪ್ರಕಾಶ ಯತ್ತಿನಹಳ್ಳಿ ವಿಶೇಷ ಉಪನ್ಯಾಸ ಕಾರ್ಯಾಕ್ರಮವನ್ನು ಮಕ್ಕಳಿಗೆ ಪ್ರಾತ್ಯಕ್ಷಿಕೆಯ ಮೂಲಕ ಮನವರಿಕೆಯಾಗುವಂತೆ ನೀಡಿದರು.

Basa 24/12/2025

ಮುಖ್ಯೋಪಾಧ್ಯಾಯರು
ಸರಕಾರಿ ಪ್ರೌ.ಶಾಲೆ ಇಟಗಿ
ತಾ॥ ರಾಣೇಬೆನ್ನೂರ ಜಿ॥ ಹಾವೇರಿ

ಕರ್ನಾಟಕ ಸರ್ಕಾರ

**ಸರಕಾರಿ ಪ್ರೌಢಶಾಲೆ ಇಟಗಿ ತಾ.ರಾಣೇಬೆನ್ನೂರು ಜಿ.ಹಾವೇರಿ 581123**

**Email**: hmghsitagi1@gmail.com mobile no: 9986968042




ವಂದನೆಗಳೊಂದಿಗೆ.

Basa

ಮುಖ್ಯೋಪಾಧ್ಯಾಯರು
ಸರಕಾರಿ ಪ್ರೌ.ಶಾಲೆ ಇಟಗಿ
ತಾ|| ರಾಣೇಬೆನ್ನೂರ ಜಿ|| ಹಾವೇರಿ

## 4. ತಿರ್ಮಾನ

ಈ ಅವಧಿಯಲ್ಲಿ ಜಿಲ್ಲಾ NRDMS ಕೇಂದ್ರವು, ಹಾವೇರಿ ಜಿಲ್ಲಾ ಪಂಚಾಯತ್, ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಅನುಷ್ಠಾನ ಇಲಾಖೆಗಳಿಗೆ ಸಂಬಂಧಿಸಿದಂತೆ ಮತ್ತು ವಿಪತ್ತು ನಿರ್ವಹಣೆಯಲ್ಲಿ ಜಿಲ್ಲಾಡಳಿತಕ್ಕೆ ಅನುಕೂಲವಾಗುವಂತೆ ವಿವಿಧ ನಕ್ಷೆಗಳು, ದತ್ತಾಂಶ ಮತ್ತು ವರದಿಗಳನ್ನು ಒದಗಿಸಿತು. ಮತ್ತು "ರಾಣೆಬೆನ್ನೂರು ಕಂಬಳಿ" ಸ್ಥಳೀಯ ಉತ್ಪನ್ನವನ್ನು ಭೌಗೋಳಿಕ ಸೂಚಿಯಡಿ ನೋಂದಣಿಗಾಗಿ ಐತಿಹಾಸಿಕ ,ಸಾಮಾಜಿಕ ಹಾಗೂ ಆರ್ಥಿಕ ಮಾಹಿತಿಯನ್ನು ಕ್ಷೇತ್ರ ವೀಕ್ಷಣೆ ಮಾಡಿ ಮಾಹಿತಿ ಸಂಗ್ರಹಿಸಿ ಕೆಎಸ್‌ಸಿಎಸ್‌ಟಿಗೆ ಸಲ್ಲಿಸಲಾಯಿತು. ವಿಜ್ಞಾನ ಪ್ರಚಾರ ಕಾರ್ಯಕ್ರಮಗಳನ್ನು ಗ್ರಾಮೀಣ ಪ್ರೌಢ ಶಾಲೆಗಳಲ್ಲಿ ಆಯೋಜಿಸಿ ಮಕ್ಕಳಲ್ಲ ವಿಜ್ಞಾನ, ಗಣಿತ,ತಂತ್ರಜ್ಞಾನಗಳ ಕುರಿತು ಅರಿವು ಕಾರ್ಯಕ್ರಮಗಳನ್ನ ಕೈಗೊಳ್ಳಲಾಗುತ್ತದೆ.

**5. NRDMS** ಚಟುವಟಿಕೆಗಳನ್ನು ಸುಧಾರಿಸಲು ಬದ್ಧತೆ:

ಜಿಲ್ಲಾ NRDMS ಕೇಂದ್ರ ZP ಹಾವೇರಿ ಜಿಲ್ಲೆಯಲ್ಲಿ ಅಭಿವೃದ್ಧಿ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಇಲಾಖೆಗೆ ಗುಣಮಟ್ಟ ಮತ್ತು ವೈಜ್ಞಾನಿಕ ನೆರವು ನೀಡಲು ಬದ್ಧವಾಗಿದೆ. ಜಿಲ್ಲಾ NRDMS ಕೇಂದ್ರವು ಅದರ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಮತ್ತು ಇಲಾಖೆಗಳಿಗೆ ಸಹಾಯ ಮಾಡಲು ಡೇಟಾಬೇಸ್ ಅನ್ನು ನವೀಕೃತವಾಗಿ ನವೀಕರಿಸಲು ಬದ್ಧವಾಗಿದೆ. ನಮ್ಮ ದಕ್ಷತೆಯನ್ನು ಸುಧಾರಿಸಲು ಇತ್ತೀಚಿನ GEO SPATIAL ತಂತ್ರಜ್ಞಾನ ಮತ್ತು ಇತರ ಸಾಫ್ಟ್‌ವೇರ್‌ಗಳನ್ನು ಕಲಿಯಲು ಮತ್ತು ನವೀಕರಿಸಲು ಕೇಂದ್ರವು ಬದ್ಧವಾಗಿದೆ.

## **06**. ಅನುಬಂಧಗಳು**:**

ನಕಾಶೆ:1. ಕಮದೊಡ ಗ್ರಾ.ಪಂ. ಸರಹದ್ದು ನಕಾಶೆ.

ನಕಾಶೆ:2 ಹಾವೇರಿ ತಾಲ್ಲೂಕು ಸರಹದ್ದು ನಕಾಶೆ.

ನಕಾಶೆ: 3 ಹಿರೇಕೆರೂರು ತಾಲ್ಲೂಕಿನ ನುಲಗೆರಿ ಗ್ರಾಮದ ನಕ್ಷೆ

ನಕಾಶೆ:4 ಕಂದಾಯ ಇಲಾಖೆಯ ಹಕ್ಕುಪತ್ರ ವಿತರಣಾ ಕಾರ್ಯಕ್ರಮಕ್ಕೆ ಪೂರಕವಾಗಿ ಕಾರ್ಯಕ್ರಮ ನಡೆಯುವ ಸ್ಥಳ ಹಾಗೂ ವಾಹನ ನಿಲುಗಡೆ ನಕ್ಷೆ.

ನಕಾಶೆ: 12 ಸವಣೂರು ಪೋಲೀಸ್ ಠಾಣೆಯ ಬೀಟ್ ವಾರು ಸರಹದ್ದು ನಕ್ಷೆ

ನಕಾಶೆ: 13 ಅಳಲಗೇರಿ KML ಗಡಿ ನಕ್ಷೆ

ಚಾರ್ಟ್ಸ್: 1&2 .NRLM ಸಂಜೀವಿನಿ ಯೋಜನೆಯಡಿ ಉದ್ಯೋಗ ಮೇಳದ ಮಾಹಿತಿಯ Power BI Dashboard

ಚಿತ್ರ:1-2 ಆಡಳಿತ ತರಬೇತಿ ಸಂಸ್ಥೆ ಮೈಸೂರಿನ ವಿಪತ್ತು ನಿರ್ವಹಣಾ ಕೇಂದ್ರದ ವತಿಯಿಂದ ಆಡಳಿತ ತರಬೇತಿಯಲ್ಲಿ ಭಾಗವಹಿಸಿದ್ದು.

ಚಿತ್ರ:3 ರಾಷ್ಟ್ರೀಯ ಗಣಿತ ದಿನಾಚರಣೆ-2025" ಆಚರಿಣೆಗೆ ಸಂಬಂಸಧಿಸಿದ್ದು.

ದಿನಾಂಕ:26-03-2026
ಸ್ಥಳ: ಹಾವೇರಿ

ಬಸವರಾಜ ಬಾರ್ಕಿ
ಯೋಜನಾ ಸಂಯೋಜಕರು
ಜಿಲ್ಲಾಎನ್.ಆರ್.ಡಿ.ಎಮ್.ಎಸ್.ಕೇಂದ್ರ,
ಜಿಲ್ಲಾ ಪಂಚಾಯತ,ಹಾವೇರಿ